ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಯವರ ನ್ಯಾಯಾಲಯ,
ಕುಂದಾಪುರ

ಸಿ.ಸಿ. ನಂಬ್ರಃ 1783-2013

ಚಾಸಾ ಃ 2 ಪ್ರಾಸಾ ಃ 2

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು

ದಿನಾಂಕಃ 27-04-2015

ವಾಗ್ಮೂಲದವರ ಹೆಸರು ಃ ರವೀಂದ್ರ
ತಂದೆ ಹೆಸರು ಃ ಸದಾಶಿವ ಶೇರಿಗಾರ್
ವಯಸ್ಸು ಃ 31 ವರ್ಷ
ಉದ್ಯೋಗ ಃ ಅಗರಭತ್ತಿ ವ್ಯಾಪಾರ
ವಾಸಸ್ಥಳ ಃ ಕೋಟೇಶ್ವರ

ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ.ರವರಿಂದಃ

ಪ್ರಾ.ಸಾ.1 ನನ್ನ ಅಕ್ಕ. ದಿಃ27-11-2012ರಂದು ರಾತ್ರಿ 12-15ಗಂಟೆ ಸಮಯಕ್ಕೆ ನಾನು ಮತ್ತು ಪ್ರಾ.ಸಾ.1ರವರು ಕೋಟೇಶ್ವರದ ಕಾಗೇರಿಯಲ್ಲಿ ದೇವರದ ಉತ್ಸವದ ಕಟ್ಟೇ ಪೂಜೆ ಮುಗಿಸಿ ಬರುತ್ತಿದ್ದಾಗ ಮಂಜುನಾಥ ಪೂಜಾರಿಯವರ ಮನೆಯ ಓಣಿಯ ಹತ್ತಿರ ಬರುತ್ತಿದ್ದಾಗ ನಾನು ಮುಂದೆ ಇದ್ದು ಪ್ರಾ.ಸಾ.1 ನನ್ನ ಹಿಂದುಗಡೆ ಇದ್ದರು. ಪ್ರಾ.ಸಾ.1ರವರ ಹಿಂದುಗಡೆ ಸ್ವಲ್ಪ ದೂರದಲ್ಲಿ ನನ್ನ ಅಣ್ಣ ಚಾಸಾ.3 ಇದ್ದರು. ಆ ಸಮಯದಲ್ಲಿ ಒಂದಿಬ್ಬರು ಎದುರುನಿಂದ ಬರುತ್ತಿದ್ದುದು ಕಂಡುಬಂದಿದ್ದು ಒಬ್ಬ ವ್ಯಕ್ತಿ ಎದುರಿನಿಂದ ನನ್ನನ್ನು ದಾಟಿ ಹೋದ. ಅಷ್ಟರಲ್ಲಿ ನನ್ನ ಅಕ್ಕ ಕಳ್ಳ ಕಳ್ಳ ನನ್ನ ಚಿನ್ನ ತೆಗೆದುಕೊಂಡು ಹೋದ ಎಂದು ಕೂಗಿದಳು. ನಾನು ನೋಡಿದಾಗ ನ್ಯಾಯಾಲಯದ ಮುಂದೆ ಇರುವ ಪ್ರಹ್ಲಾದ ಎನ್ನುವ ಆರೋಪಿ ಪಕ್ಕದಲ್ಲಿರುವ ಕೃಷಿ ಇಲಾಖೆಯ ಬೇಲಿ ದಾಟಿ ಓಡಿ ಹೋದ. ನಾನು ತುಂಬಾ ದೂರ ಅಟ್ಟಿಸಿಕೊಂಡು ಹೋದೆ ಆದರೆ ಕಾಡಿನಲ್ಲಿ ಆತ ತಪ್ಪಿಸಿಕೊಂಡ. ನಂತರ ಊರಿನವರೆಲ್ಲ ಬಂದರು ಮತ್ತು ಪೋಲೀಸರು ಸಹ ಬಂದು ಹುಡುಕಿದರೂ ಸಹ ಸಿಗಲಿಲ್ಲ. ನನ್ನ ಅಕ್ಕನ ಕರಿಮಣಿ ಸರ ಮತ್ತು ಹವಳದ ಚೈನ್‌ನ್ನು ಸದ್ರಿ ವ್ಯಕ್ತಿ ಕಸಿದುಕೊಂಡು ಹೋಗಿದ್ದ. ಸದ್ರಿ ಆಭರಣಗಳ ಮೌಲ್ಯ ಸುಮಾರು 2ವರೆ ಲಕ್ಷ ರೂ. ಆಗಬಹುದು. ತಿಂಗಳು ಬೆಳಕಿನ ಸಹಾಯದಿಂದ ನಾನು ಸದ್ರಿ ವ್ಯಕ್ತಿಯನ್ನು ನೋಡಿದ್ದೆ. ಈ ಬಗೆಗ ಪೋಲೀಸರು ನನ್ನ ವಿಚಾರಣೆ ಮಾಡಿ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿ ಪ್ರಹ್ಲಾದನನ್ನು ನೋಡಿ ಗುರುತಿಸಿರುತ್ತಾರೆ.

2. ಉಳಿದ 2ರಿಂದ 4ನೇ ಆರೋಪಿತರು ಕಟ್ಟೇ ಪೂಜಾ ಸಮಯದಲ್ಲಿ ಅಲ್ಲಿ ಇದ್ದು ಅವರು ನಮ್ಮ ಊರಿನವರು ಆಗಿರಲಿಲ್ಲ. ಒಂದು ತಿಂಗಳ ನಂತರ ಪೋಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು. ಆರೋಪಿತರನ್ನು ನನಗೆ ತೋರಿಸಿದ್ದರು ನಾನು ಅವರನ್ನು ಗುರುತು ಹಿಡಿದೆ. ನನ್ನ ಅಕ್ಕನ ಆಭರಣಗಳನ್ನು ಕಸಿದುಕೊಂಡು ಹೋಗಿದ್ದು ಮತ್ತು 1ನೇ ಆರೋಪಿಯನ್ನು ನಾನು ಹಿಂಬಾಲಿಸಿಕೊಂಡು ಹೋದ ಬಗ್ಗೆ ಮರುಹೇಳಿಕೆಯನ್ನು ನೀಡಿರುತ್ತೇನೆ. ಆರೋಪಿತರನ್ನು ತೋರಿಸಿದ ನಂತರ ನನಗೆ ನನ್ನ ಅಕ್ಕನ ಆಭರಣಗಳನ್ನು ತೋರಿಸಿದ್ದರು. ನಾನು ಸದ್ರಿ ಆಭರಣಗಳನ್ನು ಠಾಣೆಯಲ್ಲಿ ಗುರುತಿಸಿರುತ್ತೇನೆ.

ಈ ಹಂತದಲ್ಲಿ ಪ್ರಾ.ಸಾ.1ರವರು ಬಿಡಿಸಿಕೊಂಡ ಹೋದ ಆಭರಣಗಳನ್ನು ನ್ಯಾಯಾಲಯಕ್ಕೆ ತಂದಿರದ ಕಾರಣ ಮುಖ್ಯ ವಿಚಾರಣೆಯನ್ನು ಮಾನ್ಯ ಸ.ಸ.ಅ.ರವರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.